# ನಿರೀಕ್ಷಿಸದಷ್ಟು ತ್ಯಾಗಮಯಿ!

**ಚೈತ್ರಾ ಸಿ. ಸಕ್ರಿ**
ಉದಯದ
'ನಯನತಾರಾ'ದ
ನಯನಾ



◆ **ನಿಮ್ಮ ಪರಿಚಯವನ್ನು ಹೇಳಬಹುದಾ**

ಹುಟ್ಟಿದ್ದು ಬೆಳೆದಿದ್ದು ಬೆಂಗಳೂರಿನಲ್ಲಿ. ನನ್ನ ತಂದೆ ಬೆಂಗಳೂರಿನ ರೈಲ್ವೆ ಗಾಲಿ ಮತ್ತು ಅಚ್ಚು ತಯಾರಿಕೆಯ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಮೂಲತಃ ನಾವು ವಿಜಯಪುರದವರು. ಈಗಷ್ಟೆ ಬಿಕಾಂ ಮುಗಿಸಿದ್ದೇನೆ. ಕೋವಿಡ್ ಕಾರಣಕ್ಕೆ ಕಾಲೇಜಿನ ಪಾಠಗಳು ಆನ್‌ಲೈನ್‌ನಲ್ಲಿ ಇದ್ದಿದ್ದರಿಂದ ಚಿತ್ರೀಕರಣದಲ್ಲೂ ತೊಡಗಲು ಅನುಕೂಲವಾಯಿತು. ಮೊದಲಿನಿಂದ ಡಾನ್ಸ್ ಮಾಡುವ ಮೋಹ ಬೆಳೆದಿತ್ತು. ಕೆಲವು ವರ್ಷಗಳ ಹಿಂದೆ ಮಕ್ಕಳಿಗಾಗಿ ಝೀ ಕನ್ನಡ ರೂಪಿಸಿದ್ದ 'ಕುಣಿಯೋಣು ಬಾ' ರಿಯಾಲಿಟಿ ಶೋನಲ್ಲಿ ಭಾಗವಹಿಸಿದ್ದೆ. ಸ್ವಲ್ಪ ದಿನಗಳ ನಂತರ ಸನ್ ಟೀವಿಯಿಂದ ಕರೆ ಬಂತು. ಮೊದಲು ತಮಿಳು ಸೀರಿಯಲ್‌ನಲ್ಲಿ ಮಾಡಿದೆ. ತಮಿಳು ಸ್ವಲ್ಪ ಮಟ್ಟಿಗೆ ಮಾತ್ರ ಗೊತ್ತಿತ್ತು. ಡೈಲಾಗ್ ಹೇಳುವುದೂ ಕಷ್ಟ ಆಗ್ತಿತ್ತು. ತಂಡದಲ್ಲಿ ಬಹುತೇಕರು ಹೊಸಬರಿದ್ದರು. ಕ್ಯಾಮೆರಾಮನ್ ಒಬ್ಬರಿಗೆ ಕನ್ನಡ ಬರ್ತಾ ಇತ್ತು. ಅವರು ತಮಿಳನ್ನು ಹೇಳಿಕೊಡುತ್ತಿದ್ದರು. ಮೊದಲ ಕೊರೊನಾ ಅಲೆಯ ಲಾಕ್‌ಡೌನ್ ಕಾರಣಕ್ಕೆ ಬೇಗ ಮುಗಿಯಿತು. ಕಳೆದ ಡಿಸೆಂಬರ್ 'ನಯನತಾರ'ದಲ್ಲಿ ಅವಕಾಶ ಸಿಕ್ಕಿತು. ಇದು ಒಳ್ಳೆಯ ಅನುಭವಿಗಳ ತಂಡದಲ್ಲಿ ನಟಿಸುತ್ತಿದ್ದೇನೆ ಅನಿಸುತ್ತಿದೆ.

◆ **ಸಾಮಾನ್ಯವಾಗಿ ನಟನೆಗೆ ಎದುರಾಗುವ ಸವಾಲುಗಳೇನು?**

ನನಗೆ ಕನ್ನಡ ಸ್ಕ್ರಿಪ್ಟ್ ಸುಲಲಿತವಾಗಿ ಓದಲು ಸ್ವಲ್ಪ ಕಷ್ಟ ಆಗುತ್ತಿತ್ತು. ಆರಂಭದಲ್ಲಿ ಈ ಬಗ್ಗೆ ಭಯ ಇತ್ತು. ನಿರ್ದೇಶಕ ತಿಲಕ್ ಸರ್ ಹೇಳಿಕೊಡುತ್ತಾರೆ. ನನ್ನ ಸಹ ನಟರೂ ಡೈಲಾಗ್ ಹೇಗಿರಬೇಕು ಎಂದು ಹೇಳಿಕೊಡುವುದರಿಂದ ಈಗ ಕಷ್ಟ ಅಂತ ಅನಿಸುವುದಿಲ್ಲ. ನನ್ನ ವ್ಯಕ್ತಿತ್ವಕ್ಕೆ ವಿರುದ್ಧವಾದ ಗುಣವನ್ನು ಈ ಪಾತ್ರ ಒಳಗೊಂಡಿದೆ. ವೈಯಕ್ತಿಕವಾಗಿ ನಾನು ಹೆಚ್ಚು ಮಾತನಾಡುತ್ತೇನೆ. ಮನೆಯಲ್ಲಿ ಜಗಳವಾಡುತ್ತೇನೆ. ತುಂಬ ಸೌಮ್ಯ ನಡವಳಿಕೆಯ ಪಾತ್ರ ಇದು. ಇದನ್ನು ನಿರ್ವಹಿಸುವುದು ಆರಂಭದಲ್ಲಿ ಸ್ವಲ್ಪ ಕಷ್ಟ ಆಗ್ತಾ ಇತ್ತು. ಈಗ ಅದನ್ನೂ ಹೊಂದಾಣಿಕೆ ಮಾಡಿಕೊಂಡಿದ್ದೇನೆ. ಇದನ್ನು ಹೊರತಾಗಿ ಹೇಳುವಂತಹ ಸವಾಲು ಏನೂ ಇಲ್ಲ. ಕಥೆ ಚೆನ್ನಾಗಿರುವುದರಿಂದ ಪಾತ್ರ ಮನಸ್ಸಿನಾಳಕ್ಕೆ ಇಳಿದಿದೆ. ನಟನೆ ಸುಲಭವಾಗುತ್ತಿದೆ.

◆ **ಶಾಲಾ ದಿನಗಳಲ್ಲಿ ನಿಮ್ಮ ಕನಸು ಏನಿತ್ತು?**

ಡಾನ್ಸ್ ಟೀಚರ್ ಆಗಬೇಕು. ನಾನೊಂದು ಡಾನ್ಸ್ ಶಾಲೆಯನ್ನು ತೆರೆಯಬೇಕು ಎನ್ನುವ ದೊಡ್ಡ ಆಸೆ ಇತ್ತು. ಆದರೆ ವೈಯಕ್ತಿಕ ಕಾರಣಗಳಿಂದ ಡಾನ್ಸ್ ಅಭ್ಯಾಸವನ್ನೇ ನಿಲ್ಲಿಸಿದೆ. ಶಾಲೆಗಳಲ್ಲಿ ಮಾತ್ರ ಡಾನ್ಸ್ ಮಾಡುತ್ತಿದ್ದೆ. ಓದುತ್ತಿರುವಾಗಲೇ ಸಿನಿಮಾಗಳಲ್ಲಿ ಅವಕಾಶ ಸಿಕ್ಕಿತು. ಎರಡು ಸಿನಿಮಾಗಳಲ್ಲಿ ನಟಿಸಿದ್ದೇನೆ. ಇನ್ನೂ ಆ ಸಿನಿಮಾಗಳು ಬಿಡುಗಡೆಯಾಗಿಲ್ಲ. ಅಲ್ಲಿಂದ ಕಿರುತೆರೆಗೆ ಬಂದಿದ್ದೇನೆ. ಕಿರುತೆರೆ ಮತ್ತು ಹಿರಿತೆರೆಗೆ ದೊಡ್ಡ ವ್ಯತ್ಯಾಸ ಇಲ್ಲ. ಅಭಿನಯ ಎರಡೂ ಕಡೆ ಒಂದೇ ರೀತಿಯಲ್ಲಿ ಇರುತ್ತದೆ. ಇನ್ನೂ ಸಿನಿಮಾ ಬಿಡುಗಡೆ ಆಗಿಲ್ಲ.

◆ **ಬಣ್ಣದ ಜಗತ್ತಿನಲ್ಲಿ ಗರಿಗೆದರಿದ ನಿಮ್ಮ ನಿರೀಕ್ಷೆಗಳ ಬಗ್ಗೆ ಹೇಳುವುದಾದರೆ..**

ಚಿಕ್ಕ ವಯಸ್ಸಿನಲ್ಲಿಯೇ ಸಿನಿಮಾದಲ್ಲಿ ನಟಿಸಬೇಕು, ನಾಯಕಿ ಆಗಬೇಕು ಎಂದು ಕನಸು ಕಂಡಿದ್ದೆ. ಡಾನ್ಸ್ ಬಗ್ಗೆ ಕೂಡ ನನಗೆ ಅಷ್ಟೇ ಆಸಕ್ತಿ ಇತ್ತು. ಸುಮಾರು ವರ್ಷ ಡಾನ್ಸ್ ಅಭ್ಯಾಸ ಮಾಡಿದ್ದೇನೆ. ಅದು ಈಗ ನನಗೆ ನಟನೆಯನ್ನು ಸುಲಭ ಮಾಡಿದೆ. ಇನ್‌ಸ್ಟಾಗ್ರಾಮ್‌ನಲ್ಲಿಯೂ ಪುಟ್ಟ ಪುಟ್ಟ ವಿಡಿಯೊ– ರೀಲ್ಸ್ ಮಾಡುತ್ತಿರುತ್ತೇನೆ. ಅಲ್ಲಿ ಇಷ್ಟ ಆಗುವ ಗೀತೆಗಳಿಗೆ ಡಾನ್ಸ್ ಮಾಡುತ್ತಿರುತ್ತೇನೆ. ಅಭಿನಯವೇ ನನ್ನ ಆಯ್ಕೆ ಆಗಿದ್ದು ಒಳ್ಳೆಯ ಅವಕಾಶಗಳನ್ನು ನಿರೀಕ್ಷಿಸುತ್ತೇನೆ.

ಅದರಲ್ಲೂ ಬಜಾರಿ ರೀತಿಯ ಪಾತ್ರವನ್ನು ಮಾಡಬೇಕು ಎನ್ನುವ ಆಸೆಯಿದೆ. 'ಸಂಪತ್ತಿಗೆ ಸವಾಲ್' ಸಿನಿಮಾದಲ್ಲಿ ಮಂಜುಳಾ ನಟನೆಯಂತೆ ನಾನೂ ಬೋಲ್ಡ್ ಆಗಿ ಪಾತ್ರವನ್ನು ನಿರ್ವಹಿಸಬೇಕು. ಚಟಪಟ ಅರಳು ಹುರಿದಂತೆ ಮಾತನಾಡುವಂತಹ ಪಾತ್ರ ಇರಬೇಕು. ಈಗ ತುಂಬ ದಯಾಳು ಗುಣದ ಪಾತ್ರವನ್ನು ಮಾಡುತ್ತಿದ್ದೇನೆ. ನನಗೆ ತದ್ವಿರುದ್ಧದ ತಂಗಿ ಇಲ್ಲಿದ್ದಾಳೆ. ಅವಳ ಹುಡುಗಾಟವನ್ನು ಸಹಿಸಿಕೊಂಡು ನನ್ನ ಸುತ್ತ ನಡೆಯುತ್ತಿರುವ ದೌರ್ಜನ್ಯಗಳನ್ನು ನುಂಗಿಕೊಂಡು. ನಾನು ಸದ್ಗುಣವನ್ನು ಪ್ರದರ್ಶಿಸಬೇಕು. ಒಂದು ರೀತಿಯ ಭಿನ್ನ ಪಾತ್ರ. ಸ್ವಾರ್ಥ– ನಿಸ್ವಾರ್ಥದ ಕಥೆ. ಅಕ್ಕನಾಗಿ ನಾನು ನಿಸ್ವಾರ್ಥವನ್ನು ಪ್ರತಿನಿಧಿಸಿದರೆ, ತಂಗಿ ತುಂಬ ಸ್ವಾರ್ಥಿ. ಪ್ರಪಂಚದಲ್ಲಿ ತಾನು ಕಂಡಿದ್ದ ಎಲ್ಲದನ್ನೂ ಬಯಸುವ ಮನೋಭಾವ ಆಕೆಯದು. ಅಕ್ಕ ತನ್ನ ತಂಗಿಗಾಗಿ ಎಲ್ಲವನ್ನೂ ತ್ಯಾಗ ಮಾಡುತ್ತಾಳೆ. ತಾನು ಇಷ್ಟಪಡುವ ಹುಡುಗನನ್ನೂ ಕೂಡ.

■ **ರಾಘವೇಂದ್ರ ಕೆ.**